ಬೋಳು ಗುಡ್ಡ...' ಎಂದು ನಿಟ್ಟುಸಿರುಬಿಟ್ಟಳು. ಬೋಳಾದ ಆ ಬೆಟ್ಟ ಮಕ್ಕಳ ಮನಸ್ಸಿನೊಳಗೆ ಬೆಳೆಯತೊಡಗಿತು.

ಜಯಪ್ರಕಾಶ್ ಅವರು ಈ ಕಥೆ ಹೇಳುತ್ತಿದ್ದರೆ, ತುಂಬಿ ತುಳುಕುವ ತರಗತಿಯಲ್ಲಿ ಗಾಢ ಮೌನ. ಮಕ್ಕಳ ಮನಸ್ಸು ನಿಸರ್ಗದಲ್ಲಿ ಗಿರಕಿ ಹೊಡೆಯಲಾರಂಭಿಸುತ್ತದೆ.

ಮಂಗಳೂರಿನವರಾದ ಜಯಪ್ರಕಾಶ್ ಎಕ್ಕೂರ್ ಅಪ್ಪಟ ಪರಿಸರಪ್ರೇಮಿ. ಹೊಟ್ಟೆಪಾಡಿಗೆ ಪುಟ್ಟ ಇಸ್ತ್ರಿ ಅಂಗಡಿ ನಡೆಸುವ ಅವರು, ಕೆಲಸದ ನಡುವೆ ಬಿಡುವು ಮಾಡಿಕೊಂಡು, ಶಾಲೆಗಳಿಗೆ ತೆರಳಿ ಮಕ್ಕಳಲ್ಲಿ ಪರಿಸರದ ಅರಿವಿನ ಬೀಜ ಬಿತ್ತುತ್ತಾರೆ. ಅವರು ನಡೆಸುತ್ತಿರುವ 'ಆಹಾರ ಜಾಗೃತಿ, ಪರಿಸರ ಜಾಗೃತಿ ಹಾಗೂ ಪರಿಸರಸ್ನೇಹಿ ಪೇಪರ್ ಪೆನ್ ತರಬೇತಿ' ಕಾರ್ಯಾಗಾರಕ್ಕೆ ಈಗ ಶತಕದ ಸಂಭ್ರಮ. ಒಂದೂವರೆ ತಾಸಿನ ಈ ಕಾರ್ಯಾಗಾರ ಪ್ರಾರಂಭವಾಗುವುದೇ ಹಣ್ಣು ಮಾರುವ ಅಜ್ಜಿಯ ಕಥೆಯ ಮೂಲಕ.

ಮಕ್ಕಳ ಜನ್ಮದಿನ, ಪಾಲಕರ ಮದುವೆ ವಾರ್ಷಿಕೋತ್ಸವ ರೀತಿಯ ವಿಶೇಷ ಸಂದರ್ಭಗಳು ಅವರ ಕಾರ್ಯಾಗಾರಕ್ಕೊಂದು ನೆಪ. ಮಂಗಳೂರು ಸುತ್ತಮುತ್ತಲಿನ ಶಾಲೆಗಳಲ್ಲಿ ಜಯಪ್ರಕಾಶ್ ಅವರ ಕಾರ್ಯಾಗಾರಗಳು ನಡೆಯುತ್ತವೆ. ಮೂರು ವರ್ಷಗಳ ಪರಿಸರ ಪಾಠದಲ್ಲಿ ಅವರು ಸುಮಾರು 7000 ವಿದ್ಯಾರ್ಥಿಗಳನ್ನು, 500ಕ್ಕೂ ಹೆಚ್ಚು ಶಿಕ್ಷಕರನ್ನು ತಲುಪಿದ್ದಾರೆ.


ಪೇಪರ್ ಪೆನ್ ತಯಾರಿಸಿ ಸಂಭ್ರಮಿಸುತ್ತಿರುವ ಮಕ್ಕಳು

'2022ರಲ್ಲಿ ಸುರಕ್ಷಾ ಎಂಬ ವಿದ್ಯಾರ್ಥಿನಿಯ ಜನ್ಮ ದಿನಾಚರಣೆಯೊಂದಿಗೆ ಕಾರ್ಯಾಗಾರದ ಕುಡಿ ಕೊನರಿತು. ವೃತ್ತಾಕಾರದ ಅಡಿಕೆ ಹಾಳೆ, ಅದೇ ಆಕೃತಿಯ ಬಾಳೆ ಎಲೆಯಲ್ಲಿ, ತರಕಾರಿ ತುರಿ, ಮೊಳಕೆಯೊಡೆದ ಧಾನ್ಯಗಳು, ಒಣ ಹಣ್ಣುಗಳು, ಇವುಗಳಲ್ಲಿ ಸುರಕ್ಷಾಳ ಹೆಸರನ್ನು ಇಂಗ್ಲಿಷ್ ಅಕ್ಷರಗಳಲ್ಲಿ ಮೂಡಿಸಿ, ಎಂಟು ಮಕ್ಕಳು ಮುಂದೆ ಬಂದು ಆಕೆಗೆ ಜನ್ಮದಿನದ ಶುಭಾಶಯ ಕೋರುತ್ತ, ಅಡಿಕೆ ಹಾಳೆಯಲ್ಲಿದ್ದ ತಿನಿಸುಗಳನ್ನು ದೊಡ್ಡ ಪಾತ್ರೆಗೆ ಸುರುವಿದರು. ಆರೋಗ್ಯಕರ ಆಹಾರದ ಈ ಮಿಶ್ರಣವನ್ನು ಎಲ್ಲ ವಿದ್ಯಾರ್ಥಿಗಳಿಗೆ ಹಂಚುವುದರೊಂದಿಗೆ ಜನ್ಮದಿನದ ಆಚರಣೆ ನೆನಪಿನ ಪುಟದಲ್ಲಿ ಅಚ್ಚಾಯಿತು' ಎನ್ನುತ್ತ ಮೊದಲ ಕಾರ್ಯಕ್ರಮ ನೆನಪಿಸಿಕೊಳ್ಳುತ್ತಾರೆ.

ಈಗಲೂ ಅವರದು ಇದೇ ಕ್ರಮದಲ್ಲಿ ಕಾರ್ಯಕ್ರಮ ನಡೆಯುತ್ತದೆ. ಮಕ್ಕಳು ಪೌಷ್ಟಿಕ ಆಹಾರದ ಮಿಶ್ರಣ ಮೆಲ್ಲುವಾಗ, ಜಯಪ್ರಕಾಶ್ ಮತ್ತೆ ಮಾತು ಶುರು ಮಾಡುತ್ತಾರೆ.

'ನೋಡಿ ಮಕ್ಕಳೇ, ಜನ್ಮದಿನವನ್ನು ಕೇಕ್ ಕಟ್ ಮಾಡುವ ಮೂಲಕ ಆಚರಿಸುವುದು ರೂಢಿ. 'ಕಟ್' ಮಾಡುವ ಬದಲಿಗೆ 'ಒಟ್ಟು' ಮಾಡುವ ಕೆಲಸ ನಮ್ಮದಾಗಬೇಕು. ಜಾತಿ, ಧರ್ಮ, ಆ ಪಕ್ಷ, ಈ ಪಕ್ಷವೆಂದು ನಾವು ಕಟ್ ಆಗಿದ್ದೇವೆ. ಸಾಮಾಜಿಕ ಸಮಸ್ಯೆಗಳನ್ನು ಪ್ರಶ್ನಿಸುವಾಗಲೂ ಈ ಸಂಗತಿಗಳು ನಮ್ಮಲ್ಲಿ ಹಿಂಜರಿಕೆ ಸೃಷ್ಟಿಸುತ್ತವೆ. ನ್ಯಾಯ, ನೀತಿಯ ಮಾರ್ಗವನ್ನು ಅನುಸರಿಸಿ, ಪ್ರಶ್ನಿಸುವ ಮನೋಭೂಮಿಕೆ ಬೆಳೆಸಿಕೊಳ್ಳಬೇಕು. ಸಕ್ಕರೆ, ಮೈದಾ ಮಿಶ್ರಿತ ಕೇಕ್‌ಗಿಂತ, ಬಾದಾಮಿ, ಗೋಡಂಬಿ, ನೆನೆಹಾಕಿದ ಒಣದ್ರಾಕ್ಷಿ ಆರೋಗ್ಯಕ್ಕೆ ಹಿತವೆಂದು ವೈದ್ಯ ವಿಜ್ಞಾನವೂ ಹೇಳುತ್ತದೆ. ಒಟ್ಟಿನಲ್ಲಿ, ಒಟ್ಟು ಮಾಡುವ ಸಂಸ್ಕೃತಿ ದೇಹ ಹಾಗೂ ದೇಶಕ್ಕೆ ಒಳಿತು' ಎಂದಾಗ ಮಕ್ಕಳು ಮತ್ತೊಮ್ಮೆ ಚಪ್ಪಾಳೆ ತಟ್ಟುವುದರೊಂದಿಗೆ ಮೊದಲ ಹಂತದ ಆಹಾರ ಜಾಗೃತಿ ಕಾರ್ಯಕ್ರಮ ಸಮಾಪ್ತಿಯಾಗುತ್ತದೆ. ಮುಂದೆ ಪರಿಸರ ಜಾಗೃತಿ ಕಾರ್ಯಕ್ರಮದ ಸರದಿ.

ಮಕ್ಕಳ ಬಳಿ ಕ್ಷಮೆ ಕೇಳುವುದರೊಂದಿಗೆ ಮಾತು ಆರಂಭಿಸುವ ಅವರು, 'ನಮ್ಮ ಪೂರ್ವಿಕರು ಬಿಟ್ಟು ಹೋಗಿರುವ ಪ್ರಕೃತಿಯನ್ನು ಅದೇ ರೀತಿಯಲ್ಲಿ ನಿಮಗೆ ಹಸ್ತಾಂತರಿಸುವಲ್ಲಿ ನಮ್ಮ ಪೀಳಿಗೆಯವರು ಸೋತಿದ್ದೇವೆ. ನೀವೂ ನಿಮ್ಮ ಮುಂದಿನ ಪೀಳಿಗೆಯವರ ಬಳಿ ಕ್ಷಮೆ ಕೇಳದಂತಾಗಲು, ಒಂದಿಷ್ಟು ಸಲಹೆ ನನ್ನ ಬಳಿಯಿವೆ' ಎನ್ನುತ್ತ ಪರಿಸರ ಪೂರಕ 30 ಅಂಶಗಳ ಕರಪತ್ರವನ್ನು ಮಕ್ಕಳ ಕೈಗಿಡುತ್ತಾರೆ. ಒಬ್ಬೊಬ್ಬ ವಿದ್ಯಾರ್ಥಿ ಒಂದೊಂದು ಅಂಶ ಓದಿದಂತೆ, ನೀರು, ಆಹಾರದ ಮಹತ್ವ, ಪ್ಲಾಸ್ಟಿಕ್ ಬಳಕೆ ನಿಯಂತ್ರಣ, ಬಟ್ಟೆ ಚೀಲ ಬಳಸುವಿಕೆ, ವಿದ್ಯುತ್ ಮಿತ ಬಳಕೆ, ಮಳೆ ನೀರು ಇಂಗಿಸುವಿಕೆಯ ಬಗ್ಗೆ ಅವರು ವಿವರಣೆ ನೀಡುತ್ತಾರೆ. ಆಗ, ಮಕ್ಕಳ ಮನದಲ್ಲಿ ಕಾಡು–ನಾಡು, ಮರ–ಗಿಡ, ಪ್ರಾಣಿ–ಪಕ್ಷಿಗಳ ಕಲರವ.

ವಿದ್ಯುತ್ ಬಳಸಿದರೆ ಮನೆಗೆ ಕರೆಂಟ್ ಬಿಲ್ ಬರುತ್ತದೆ. ನೀರಿನ ಬಳಕೆಗೆ ಮಹಾನಗರ ಪಾಲಿಕೆ ನೀರಿನ ಬಿಲ್ ಕಳುಹಿಸುತ್ತದೆ. ಪ್ರಕೃತಿಗೆ ಇಷ್ಟೆಲ್ಲ ಶೋಷಣೆಯಾದರೂ ಅದು ಒಮ್ಮೆಯಾದರೂ ನಮ್ಮ ಮನೆಗೆ ಬಿಲ್ ಕಳುಹಿಸಿದೆಯಾ ಎಂಬ ಅವರ ತಾರ್ಕಿಕ ಪ್ರಶ್ನೆ ಮಕ್ಕಳಲ್ಲಿ ಪರಿಸರ ಕಾಳಜಿಯ ಕಿಚ್ಚು ಮೂಡಿಸುತ್ತದೆ.

ಬಳಸಿ ಬಿಸಾಡುವ ಪೆನ್‌ಗಳೇ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸಿರುವ ಈ ಕಾಲದಲ್ಲಿ ಪೇಪರ್ ಪೆನ್ ತಯಾರಿಸುವ ಬಗ್ಗೆ ಜಯಪ್ರಕಾಶ್ ಹೇಳಿಕೊಡುತ್ತಾರೆ. ತಾವು ಕಲಿತ ಕಿಟಲ್ ಮೆಮೊರಿಯಲ್ ಶಾಲೆಯಲ್ಲಿ ಬಳಸಿ ಬಿಸಾಡುವ ಪ್ಲಾಸ್ಟಿಕ್ ಬಾಟಲಿಗಳನ್ನು ಉಪಯೋಗಿಸಿ, ಮಕ್ಕಳು ಕುಳಿತುಕೊಳ್ಳಲು ಮಾದರಿ ಬೆಂಚ್ ಒಂದನ್ನು ತಯಾರಿಸಿದ್ದಾರೆ.

ರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟ (ಎನ್‌ಇಸಿಎಫ್) ಎಂಬ ಪರಿಸರ ಸಂಘಟನೆಯ ಸದಸ್ಯರಾಗಿರುವ ಜಯಪ್ರಕಾಶ್ ಅವರ ಪರಿಸರ ತುಡಿತ, ವಿನಯವಂತಿಕೆ, ಸರಳ ಜೀವನವನ್ನು ಹತ್ತಿರದಿಂದ ಕಂಡಿರುವ ಅನೇಕ ಸಹೃದಯರು ಈ ಕಾರ್ಯಾಗಾರಗಳಿಗೆ ಪ್ರಾಯೋಜಕತ್ವ ನೀಡುತ್ತಿದ್ದಾರೆ.

'ವೃತ್ತಿ ಮತ್ತು ಪ್ರವೃತ್ತಿ ಎರಡನ್ನೂ ಸರಿದೂಗಿಸಿಕೊಳ್ಳಬೇಕಾದ ಸವಾಲನ್ನು ನಮ್ಮ ಲಾಂಡ್ರಿಯ ಗ್ರಾಹಕರು ಹಗುರಗೊಳಿಸಿದ್ದಾರೆ. ಕಾರ್ಯಾಗಾರಗಳಿಗೆ ಹೋಗುವಾಗ ಅಂಗಡಿ ಬಾಗಿಲು ಮುಚ್ಚಲೇಬೇಕಾಗುತ್ತದೆ. ಆ ಹೊತ್ತಿನಲ್ಲಿ ಗ್ರಾಹಕರು ಬಂದರೆ ಪಕ್ಕದ ಅಂಗಡಿಯಲ್ಲಿ ಇಸ್ತ್ರಿ ಬಟ್ಟೆ ಇಟ್ಟು ಹೋಗುತ್ತಾರೆ. ಕಾರ್ಯಕ್ರಮ ಮುಂಚಿತ ನಿಗದಿಯಾದಾಗ ಬೆಳಗ್ಗೆ 4.30ಕ್ಕೆ ಅಂಗಡಿಗೆ ಬಂದು, ಇಸ್ತ್ರಿ ಕೆಲಸ ಮುಗಿಸಿ ಶಾಲೆಗಳಿಗೆ ತೆರಳುವುದನ್ನು ರೂಢಿಸಿಕೊಂಡಿದ್ದೇನೆ' ಎಂದವರು ಗ್ರಾಹಕರನ್ನು ಸ್ಮರಿಸಿಕೊಳ್ಳುತ್ತಾರೆ.

ಜಯಪ್ರಕಾಶ್ ಅವರ ಸಂಪರ್ಕ: 9341947954.

ಪ್ರತಿಕ್ರಿಯಿಸಿ: feedback@sudha.co.in